

ಕನ್ನಡ ಮತ್ತು ತೆಲುಗು ಸಿನಿಮಾಗಳ ಸಂಪರ್ಕವೂ ಬೆಳೆದಿತ್ತು. ಬೆಂಗಳೂರಿಗೆ ಬಂದ ನಿಧಿ, 'ಕಥಾಸಂಗಮ'ದ 'ಲಚ್ಚವ್ವ'ದಲ್ಲಿ ಪುಟ್ಟ ಪಾತ್ರದಲ್ಲಿ ನಟಿಸಿದ್ದೂ ಅಲ್ಲದೆ ತೆರೆಯ ಹಿಂದೆಯೂ ಕೆಲಸ ಮಾಡಿದರು.

ನಂತರ ಗಣೇಶ್ ಹೆಗಡೆ ನಿರ್ದೇಶನದ 'ನೀಲಿ ಹಕ್ಕಿ' ಸಿನಿಮಾದಲ್ಲಿ ಗೋಪಾಲಕೃಷ್ಣ ದೇಶಪಾಂಡೆ ಅವರ ಜೊತೆ ನಟಿಸುವ ಅವಕಾಶ ಸಿಕ್ಕಿತು. ಅಷ್ಟರಲ್ಲಿ ತೆಲುಗಿನ 'ಸುಖೀಭವ' ಸಿನಿಮಾದಲ್ಲಿಯೂ ನಾಯಕಿಯಾಗಿ ನಟಿಸುವ ಅವಕಾಶ ಸಿಕ್ಕಿತು. ಜೊತೆಗೆ ಪವನ್ ಒಡೆಯರ್ ನಿರ್ಮಾಣದ 'ಡೊಳ್ಳು' ಸಿನಿಮಾದಲ್ಲಿಯೂ ನಿಧಿ ನಾಯಕಿಯಾದರು.

'ನೀಲಿ ಹಕ್ಕಿ' ಮತ್ತು 'ಡೊಳ್ಳು' ಹಲವು ಅಂತರರಾಷ್ಟ್ರೀಯ ಸಿನಿಮೋತ್ಸವಗಳಲ್ಲಿ ಪ್ರದರ್ಶನ ಕಂಡು ಪ್ರಶಸ್ತಿಗಳನ್ನೂ ಗೆದ್ದುಕೊಂಡಿವೆ. 'ನೀಲಿಹಕ್ಕಿ' ಸಿನಿಮಾ ನೋಡಿ ಮೆಚ್ಚಿಕೊಂಡಿರುವ ವಿಜಯ್ ಸೇತುಪತಿ ಅದನ್ನು ಪ್ರೆಸೆಂಟ್ ಮಾಡುತ್ತಿದ್ದಾರೆ.

ಕನ್ನಡದಲ್ಲಿ ನಟಿಸಿದ ಮೊದಲ ಎರಡೂ ಸಿನಿಮಾಗಳು ಆಫ್‌ಬೀಟ್ ಸಿನಿಮಾಗಳೇ ಆಗಿರುವ ಕುರಿತು ಹೆಮ್ಮೆಯಿಂದಲೇ ಮಾತಾಡುವ ನಿಧಿಗೆ ಕಮರ್ಷಿಯಲ್ ಸಿನಿಮಾಗಳ ಮೂಲಕ ಗುರ್ತಿಸಿಕೊಳ್ಳುವ ಹಂಬಲವೂ ಇಲ್ಲದಿಲ್ಲ.

'ನಾನು ಇಲ್ಲಿಗೆ ಬಂದಿರುವುದು ನಟಿಸಲು. ನನಗೆ ಎಲ್ಲ ರೀತಿಯ ಸಿನಿಮಾಗಳೂ ಬೇಕು. ಆಫ್‌ಬೀಟ್ ಆಗಲಿ, ಕಮರ್ಷಿಯಲ್ ಆಗಲಿ ಒಳ್ಳೆಯ ಕಥೆ ಇರಬೇಕು. ಸ್ಕ್ರೀನ್ ಸ್ಪೇಸ್ ಅಥವಾ ಪಾತ್ರಕ್ಕಿಂತ ಹೆಚ್ಚಾಗಿ ಒಂದು ಒಳ್ಳೆಯ ಕಥೆಯ ಭಾಗವಾಗುವ ಖುಷಿ ನನಗೆ ಮುಖ್ಯ' ಎಂದು ಹೇಳುವ ನಿಧಿಗೆ ನಟನಾವೃತ್ತಿ ಕೊಡುತ್ತಿರುವ ಅನುಭವದಿಂದ ಪುಳಕಿತರಾಗಿದ್ದಾರೆ.

'ನಾನು ನಿಧಿಯಾಗಿ ಬದುಕುತ್ತಲೇ, ಎಷ್ಟೆಲ್ಲ ಪಾತ್ರಗಳನ್ನು ಅನುಭವಿಸಲು ಸಾಧ್ಯ. ಎಷ್ಟೆಲ್ಲ ಬಗೆಯ ಜನರೊಟ್ಟಿಗೆ ಒಡನಾಡಲು ಸಾಧ್ಯ. ನನ್ನ ಬದುಕಿಗಿಂತ ಭಿನ್ನವಾದ ಹಲವು ಬದುಕುಗಳನ್ನು ಪಾತ್ರಗಳ ರೂಪದಲ್ಲಿ ಬದುಕಲು ಸಾಧ್ಯ. ಇಂಥ ಅವಕಾಶ ಎಷ್ಟು ಜನರಿಗೆ ಸಿಗುತ್ತದೆ ಹೇಳಿ? ಈ ವಿಷಯದಲ್ಲಿ ನಾನು ತುಂಬ ಅದೃಷ್ಟವಂತೆ' ಎನ್ನುತ್ತಾರೆ ಅವರು.

ಈ ನಡುವೆ ನಿಧಿ ಅವರು ಮಾನಸಿಕ ಆರೋಗ್ಯದ ಕುರಿತಾದ ಒಂದು ಆಲ್ಬಂ ಸಾಂಗ್‌ನಲ್ಲಿ ನಟಿಸಿದ್ದಾರೆ. ರಾಘವ್ ನಿರ್ದೇಶಿಸಿದ ಈ ಆಲ್ಬಂ ಪರಮ್‌ವಾ ಸ್ಟೂಡಿಯೊದಲ್ಲಿ ಬಿಡುಗಡೆಯಾಗಿದೆ. .

'ಒಳ್ಳೆಯ ಅವಕಾಶಕ್ಕಾಗಿ ಎದುರು ನೋಡುತ್ತಿದ್ದೇನೆ. ಈಗ ನಟಿಸಿದಂಥ ಆಫ್‌ಬೀಟ್ ಸಿನಿಮಾಗಳಲ್ಲಿಯೂ ನಟಿಸುತ್ತೇನೆ. ಕಮರ್ಷಿಯಲ್ ಸಿನಿಮಾಗಳನ್ನೂ ಒಪ್ಪಿಕೊಳ್ಳುತ್ತೇನೆ. ಆದರೆ ನನ್ನೊಳಗಿನ ಕಲಾವಿದೆಯನ್ನು ಬೆಳೆಸುವಂಥ ಗಟ್ಟಿ ಪಾತ್ರಗಳಿಗಾಗಿ ಕಾಯುತ್ತೇನೆ' ಎನ್ನುವ ನಿಧಿ ಅವರ ಪ್ರತಿಭೆಯ ನಿಧಿಯನ್ನು ಚಂದನವನ ಗಮನಿಸಬೇಕಿದೆ.

## ‘ಅಬ ಜಬ ದಬ’ದಲ್ಲಿ ಪೃಥ್ವಿ?



'ಕನ್ನಡ್ ಗೊತ್ತಿಲ್ಲ' ಸಿನಿಮಾದ ಮೂಲಕ ನಿರ್ದೇಶನಕ್ಕೆ ಇಳಿದಿದ್ದ ಮಯೂರ ರಾಘವೇಂದ್ರ ಈಗ ತಮ್ಮ ನಿರ್ದೇಶನದ ಎರಡನೇ ಸಿನಿಮಾದ ಹೆಸರು ಜಾಹೀರುಗೊಳಿಸಿದ್ದಾರೆ. ಕನ್ನಡ ನಾಡಿನಲ್ಲಿದ್ದುಕೊಂಡು ಕನ್ನಡ ಗೊತ್ತಿಲ್ಲದವರು ಸರ್ವೇ ಸಾಮಾನ್ಯವಾಗಿ ಬಳಸುವ ಶಬ್ದವನ್ನೇ ತಮ್ಮ ಮೊದಲ ಸಿನಿಮಾ ಶೀರ್ಷಿಕೆಯಾಗಿ ಬಳಸಿಕೊಂಡಿದ್ದ ಅವರು, ಎರಡನೇ ಸಿನಿಮಾಗೂ ವಿಚಿತ್ರವಾದ ಹೆಸರನ್ನೇ ಇಟ್ಟಿದ್ದಾರೆ. 'ಅಬ ಜಬ ದಬ' ಇದು ಸಿನಿಮಾದ ಹೆಸರು. ಸಿನಿಮಾ ಹೆಸರು ಬಿಡುಗಡೆಯಾ ಜೊತೆಗೆ 'ಇದರಲ್ಲಿ ಶಂಕರ್‌ನಾಗ್ ಇರುತ್ತಾರೆ' ಎಂಬ ಇನ್ನೊಂದು ಸುದ್ದಿಯನ್ನೂ ಹರಿಬಿಟ್ಟು ಜನರು ತಲೆಕೆರೆದುಕೊಳ್ಳುವ ಹಾಗೆ ಮಾಡಿದ್ದಾರೆ. ಈ ಎರಡು ಕಾರಣಕ್ಕೆ ಈ ಸಿನಿಮಾ ಸೋಷಿಯಲ್ ಮೀಡಿಯಾಗಳಲ್ಲಿಯೂ ಸೌಂಡು ಮಾಡುತ್ತಿದೆ.



ಇದೀಗ ಈ ಚಿತ್ರದ ಕುರಿತಂತೆ ಇನ್ನೊಂದು ಸುದ್ದಿಯೂ ಹಬ್ಬಿದೆ. ಚಿತ್ರತಂಡವೇನೂ ಈ ಚಿತ್ರದ ತಾರಾಗಣದ ಬಗ್ಗೆ ತುಟಿಕ್ ಪಿಟಿಕ್ ಅಂದಿಲ್ಲ. ಆದರೆ ಈ ಚಿತ್ರದಲ್ಲಿ ಪೃಥ್ವಿ ಅಂಬರ್ ನಾಯಕನಾಗಿ ನಟಿಸಲಿದ್ದಾರೆ ಎಂಬ ಸುದ್ದಿಯೊಂದು ಗಾಂಧಿನಗರದ ಗಲ್ಲಿಗಳಲ್ಲಿ ಸುಳಿದಾಡುತ್ತಿದೆ.

'ದಿಯಾ' ಸಿನಿಮಾದ ಮೂಲಕ ಸಾಕಷ್ಟು ಪ್ರಸಿದ್ಧಿ ಗಳಿಸಿದ ಪೃಥ್ವಿ ಕೈಯಲ್ಲೀಗ ಹಲವು ಸಿನಿಮಾಗಳಿವೆ. ಅವರು ನಟಿಸಲಿರುವ ಸಿನಿಮಾಗಳ ಪಟ್ಟಿಗೆ 'ಅಬ ಜಬ ದಬ' ಕೂಡ ಸೇರಿಕೊಂಡಿದ್ದರೆ ಅಚ್ಚರಿಯೇನಿಲ್ಲ. ಇದೊಂದು ಫ್ಯಾಂಟಸಿ ರೋಮ್–ಕಾಮ್ ಸಿನಿಮಾವಂತೆ. ಮಯೂರ ರಾಘವೇಂದ್ರ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ ಈ ಸಿನಿಮಾವನ್ನು ಅನಂತ ಕೃಷ್ಣ ಅವರು ನಿರ್ಮಿಸುತ್ತಿದ್ದಾರೆ.



## ರೀಲ್ ರಶ್ಮಿಕಾ!

ಕನ್ನಡದ ಹುಡುಗಿ ರಶ್ಮಿಕಾ ಈಗ ದಕ್ಷಿಣ ಭಾರತದ ಬಹುಬೇಡಿಕೆಯ ನಟಿ. ಬಾಲಿವುಡ್ ಅಂಗಳಕ್ಕೂ ಪಾದಸ್ಪರ್ಶ ಮಾಡಿ ಅದೃಷ್ಟಪರೀಕ್ಷೆ ನಡೆಸುತ್ತಿರುವವರು. ರಶ್ಮಿಕಾ ಸೋಷಿಯಲ್ ಮೀಡಿಯಾಗಳಲ್ಲಿ ಬಹಳ ಸಕ್ರಿಯವಾಗಿರುವ ಸೆಲೆಬ್ರಿಟಿ. ಹಾಗಾಗಿ ಅವರು ಏನೇ ಮಾಡಿದರೂ ಸುದ್ದಿಯಾಗುತ್ತಲೇ ಇರುತ್ತದೆ. ಅದು ಅವರಿಗೂ ಗೊತ್ತು. ಸದ್ಯಕ್ಕೆ ಅಲ್ಲು ಅರ್ಜುನ್ ಜೊತೆ ನಟಿಸಿರುವ ತೆಲುಗಿನ 'ಪುಷ್ಪ' ಸಿನಿಮಾ ಗುಂಗಿನಲ್ಲಿ ಅವರಿದ್ದಾರೆ. ಕನ್ನಡವೂ ಸೇರಿದಂತೆ ಹಲವು ಭಾಷೆಗಳಲ್ಲಿ ಬಿಡುಗಡೆಯಾಗಿರುವ ಈ ಚಿತ್ರದಲ್ಲಿ ರಶ್ಮಿಕಾ ಬುಡಕಟ್ಟು ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ತಮ್ಮ ಇನ್‌ಸ್ಟಾ ಖಾತೆಯಲ್ಲಿ ಆ ಚಿತ್ರದ 'ಸಾಮಿ ಸಾಮಿ' ಹಾಡಿಗೆ ಹೆಜ್ಜೆ ಹಾಕಿ ರೀಲ್ ಮಾಡಿರುವುದಲ್ಲದೆ ತಮ್ಮ ಅಭಿಮಾನಿಗಳಿಗೂ ರೀಲ್ ಮಾಡುವಂತೆ ಆಹ್ವಾನಿಸಿದ್ದಾರೆ. ರಶ್ಮಿಕಾ ಕರೆಕೊಟ್ಟ ಮೇಲೆ ಕೇಳಬೇಕೆ? ಅಭಿಮಾನಿಗಳು ಸಾಲು ಸಾಲಾಗಿ ಅದೇ ಹಾಡಿಗೆ ರೀಲ್ ಮಾಡಿ ಇನ್‌ಸ್ಟಾಗ್ರಾಮ್‌ನಲ್ಲಿ ಹರಿಬಿಡುತ್ತಿದ್ದಾರೆ.

ಸುಕುಮಾರ್ ನಿರ್ದೇಶನದ 'ಪುಷ್ಪ' ಸಿನಿಮಾದಲ್ಲಿ ಕನ್ನಡದ ಧನಂಜಯ್, ಮಲಯಾಳಂನ ಫಹಾದ್ ಫಾಸಿಲ್ ಸೇರಿದಂತೆ ಹಲವು ಭಾಷೆಯ ತಾರೆಗಳು ನಟಿಸಿದ್ದಾರೆ. ಡಿ. 17 ರಂದು ಬಿಡುಗಡೆಯಾಗಲಿರುವ ಈ ಸಿನಿಮಾ ಈ ವರ್ಷದ ಬಹುನಿರೀಕ್ಷಿತ ಚಿತ್ರಗಳಲ್ಲೊಂದು.